12
ನೋಡಿದೆ ಎಂದಳು
ಹುಡುಕಿದರೂ ನನ್ನನ್ನೇ ನಾನು ಕಾಣಲಾಗಿಲ್ಲ
ಅವಳಿಗೆ ಸಿಕ್ಕಿದ್ದು – ದಕ್ಕಿದ್ದು ಹೇಗೆ?
ನೋಡಿದ್ದಾದರೂ ಯಾರನ್ನು?
ಕೇಳಿದೆ
ಕಣ್ಣಲ್ಲಿ ಕಣ್ಣು ನೆಟ್ಟು
ನೋಡು ಎಂದಳು
ಹೌದು
ನನ್ನನ್ನೇ ನಾನು ಕಂಡೆ



13
ಸುರಿವ ಈ ಮಳೆಗೆ
ಒಳಗುರಿವ ಬೆಂಕಿಗೆ
ಹರಿವಂತೆ ಹೊಕ್ಕಳ
ಬಳ್ಳಿ
ನಡುರಾತ್ರಿಯಲಿ ಅರಳಿ
ಊರು ತುಂಬ ಪರಿಮಳ ಸುರಿವ
ಬ್ರಹ್ಮಕಮಲ
ಅವಳ ಮುಂದೆ ಕುಳಿತ ನನಗೆ
ಹರಿವಂತೆ ಒಳಗಿನೆಲ್ಲವೂ
ಮತ್ತ ಕಣ್ಣಲ್ಲಿ
ಇಳಿವಂತೆ ಆ ಕೊಳಕೆ

14
ಆ ಸಾಗರದ ಅಲೆಯೊಡನೆ ಮಾತಾಡಿದೆ
ಒಂದೊಂದು ಅಲೆಗೂ ಒಂದೊಂದು ಬಣ್ಣ
ತುಂಬಿದರೂ ಹಾಲ್ಗಡಲದು
ಅಲೆಗಳ ಮೇಲೆ ಅಲೆದೆ
ಮೈ ಕೈ ಗೆ ಮೆತ್ತಿ ಕಳಿಸಿದೆ
ಸಾಗರ
ಆ ಸಾಗರದ ಮೊಣಕಾಲು ಹಿಡಿದೆ
ಕಾಲ್ಗೆಜ್ಜೆಯ ಸದ್ದು ಆಲಿಸಿದೆ
ಈ ಎದೆ ಮೇಲೆ
ಧಿಮಿಧಿಮಿಧಿಮಿ ಕುಣಿದ ಹಾಗೆ
ಸದ್ದು!
ಪರಿಮಳದ ಹಾದಿಯಲಿ ತುಂಬಿ ಅಲೆದಂತೆ
ದಿಕ್ಕೆಟ್ಟು ಅಲೆದೆ
ಮೈಗೆ ರೆಕ್ಕೆ ಮೂಡಿ ತುಂಬಿಯೇ ಆದೆ
ಆ ಅಲೆಯೆ ಹಾದಿ ಕಾಣಿಸಿತು
ಆ ಕಾಲ್ಗೆಜ್ಜೆ ಮಾತನಾಡಿಸಿತು
ಈ ಪರಿಮಳದ ಪಥದಲಿ ತುಂಬಿ
ಅಲೆಯುತಲೇ ಇದೆ

❖